ಈ ಯೋಜನೆಯಡಿಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಕೊಳಚೆ ಪ್ರದೇಶವನ್ನು ಮಾದರಿಯಾಗಿ ತೆಗೆದುಕೊಂಡು ಮೂಲಭೂತ ಸೌಲಭ್ಯ ಒದಗಿಸುವುದಾಗಿದೆ. ಹಾಗೂ ಈ ಯೋಜನೆಯನ್ನು 1996-97ನೇ ಸಾಲಿನ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದ್ದು, ಅನುಷ್ಠಾನಗೊಳಿಸಲಾಗುವುದು.

ಬೆಳೆ ವಿಮಾ ಯೋಜನೆ ಕುರಿತು

528 (830) ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ವಿಮಾ ಯೋಜನೆಯನ್ನು ಯಾವ ರೀತಿ ಜಾರಿಗೊಳಿಸಲಾಗುತ್ತಿದೆ.

ಆ) 1994-95 ಹಾಗೂ 1995-96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಭತ್ತದ ಫೈರು ನಾಶವಾಗಿ ಯಾವ ಯಾವ ತಾಲ್ಲೂಕಿಗೆ ಎಷ್ಟು ವಿಮಾ ಪರಿಹಾರ ಹಣ ದೊರಕಿದೆ.

ಇ) ಇದುವರೆವಿಗೂ ವಿಮಾ ಪರಿಹಾರ ಹಣ ದೊರಕದೇ ಇದ್ದಲ್ಲಿ ಕಾರಣವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಬೆಳೆ ವಿಮಾ ಯೋಜನೆಯನ್ನು ರಾಜ್ಯದಲ್ಲಿ ಸರಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸ್ಥಳೀಯ ಗ್ರಾಮೀಣ ಬ್ಯಾಂಕುಗಳಿಂದ ಬೆಳೆ ಸಾಲ ಪಡೆದ ರೈತರಿಗೆ ಅನ್ವಯವಾಗದಂತೆ ಜಾರಿಗೊಳಿಸಲಾಗುತ್ತದೆ.

ಆ) 1994-95ನೇ ಸಾಲಿನಲ್ಲಿ ಬೆಳೆ ನಾಶವಾಗಿಲ್ಲ ರಾಗಿ ಧಾರವಾಡ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿಯೂ ಭತ್ತದ ಬೆಳೆಗೆ ಬೆಳೆ ವಿಮಾ ನಷ್ಟ ಪರಿಹಾರವು ದೊರಕಿರುವುದಿಲ್ಲ.

1995-96 ನೇ ಸಾಲಿನಲ್ಲಿ ಭತ್ತದ ಬೆಳೆ ಬೆಳೆ ವಿಮಾ ನಷ್ಟ ಪರಿಹಾರವು ಇದುವರೆವಿಗೂ ನೀಡಿರುವುದಿಲ್ಲ.

ಇ) ರಾಜ್ಯ ಸರ್ಕಾರದ 1:3 ಭಾಗದ ಪಾಲನ್ನು ಸಾಮಾನ್ಯ ವಿಮಾ ನಿಗಮಕ್ಕೆ ಬಿಡುಗಡೆ ಮಾಡಿದ್ದು ಕೇಂದ್ರ ಸರ್ಕಾರದ ಪಾಲಾದ 2:3 ಭಾಗದ ಸಾಮಾನ್ಯ ವಿಮಾ ನಿಗಮಕ್ಕೆ ಶೀಘ್ರದಲ್ಲಿಯೇ ಬಿಡುಗಡೆಯಾಗಲಿದ್ದು, ಅದು ತಲುಪಿದ ಕೂಡಲೇ ಅರ್ಥ ರೈತರಿಗೆ ಪರಿಹಾರವನ್ನು ನೀಡಲಾಗುವುದು.

ಸರ್ಕಾರಿ ಭೂಮಿಯನ್ನು ಮಂಜೂರು ಮಂಜೂರಾತಿಗೆ ವಿವರ.

529 (815) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ): ಶ್ರೀ ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯರಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಯಾವ ಉದ್ದೇಶಗಳಿಗಾಗಿ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಲಾಗುವುದು(ಉದ್ದೇಶದ ಸಂಪೂರ್ಣ ವಿವರ ನೀಡುವುದು

ಮತ್ತು

ಅ) ಯಾವ ಸಂಘ ಸಂಸ್ಥೆಗಳಿಗೆ, ಖಾಸಗಿ ವ್ಯಕ್ತಿಗಳಿಗೆ ಯಾವ ಉದ್ದೇಶಗಳಿಗಾಗಿ ಮಂಜೂರು ಮಾಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಸರ್ಕಾರಿ ಜಮೀನುಗಳು ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ವಯ ಮಂಜೂರಾಗಿ ಅರ್ಹವಿದ್ದಲ್ಲಿ ರೈತರಿಗೆ ಕೃಷಿಗಾಗಿ ಪ್ಲಾಟೇಷನ್ ಬೆಳೆಗಳಿಗಾಗಿ, ಗೃಹ ನಿರ್ಮಾಣಕ್ಕಾಗಿ ಕರ್ನಾಟಕ ಗೃಹಮಂಡಳಿಗೆ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ತಾಯಿತಿಗಳಿಗೆ ಶಾಲೆ, ಆಸ್ಪತ್ರೆ ಹಾಗೂ ಸಾರ್ವಜನಿಕ ಸೌಲಭ್ಯಕ್ಕಾಗಿ ಜಮೀನು ನೀಡುವಿಕೆ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕರ್ನಾಟಕ ರಾಜ್ಯ ವಿದ್ಯುತ್ ಮಂಡಳಿಗೆ ಧಾರ್ಮಿಕದತ್ತಿ ಸಂಸ್ಥೆಗಳಿಗೆ ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ ಜಮೀನುಗಳನ್ನು ಮಂಜೂರು ಮಾಡಲಾಗುವುದು.

ಮಾಗಡಿ ತಾಲ್ಲೂಕಿನ ರಂಗನಾಥಸ್ವಾಮಿ ಹಾಗೂ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ.

530 (814) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಟೌನಿನಲ್ಲಿ ಶಿಥಿಲವಾಗಿರುವ ಶ್ರೀರಂಗನಾಥಸ್ವಾಮಿ ಹಾಗೂ ಸೋಮೇಶ್ವರ ಸ್ವಾಮಿ ಹಾಗೂ ಸೋಮೇಶ್ವರ ದೇವಾಲಯಗಳ ಜೀರ್ಣೋದ್ಧಾರ ಮಾಡುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಜೀರ್ಣೋದ್ಧಾರದ ಸ್ವರೂಪವೇನು: ಇದಕ್ಕಾಗಿ ಎಷ್ಟು ಹಣ ಮಂಜೂರು ಮಾಡಲಾಗುವುದು ಯಾವಾಗ?

ಶ್ರೀ ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ಮಾಗಡಿ ಟೌನಿನಲ್ಲಿರುವ ಶ್ರಸೋಮೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಪಡಿಸುವ ಪ್ರಸ್ತಾಪನೆ ಮಾತ್ರ ಇರುತ್ತದೆ ಶ್ರೀ ರಂಗನಾಥಸ್ವಾಮಿ ದೇವಾಲಯದ ಜೀರ್ಣೋದ್ಧಾರಪಡಿಸುವ ಪ್ರಸ್ತಾಪನೆ ಇರುವುದಿಲ್ಲ.

ಆ) ಶ್ರೀಸೋಮೇಶ್ರ ಸ್ವಾಮಿ ದೇವಾಲಯದ ಮಹೋಗೋಪುರ ಸಂರಕ್ಷಣೆ ಮತ್ತು ಶ್ರೀ ಸೋಮೇಶ್ವರಸ್ವಾಮಿ ಮತ್ತು ಅಮ್ಮನವರ ದೇವಾಲಯಗಳ ದುರಸ್ಥಿ ಮತ್ತು ಸಂರಕ್ಷಣೆ ಹಾಗೂ ಕಾಂಪೌಂಡ್ ನಿರ್ಮಾಣ.

ಈ ಕಾಮಗಾರಿಗಳಿಗೆ ಕ್ರಮವಾಗಿ ರೂ. 10.00 ಲಕ್ಷ ಮತ್ತು ರೂ. 5.00 ಲಕ್ಷ ಅಂದಾಜುಪಟ್ಟಿ ತಯಾರಿಸಿದ್ದು ರೂ. 3.00 ಲಕ್ಷ ಅನುದಾನವನ್ನು 1995-96ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. ಉಳಿದ ಮೊತ್ತವನ್ನು ಸಾರ್ವಜನಿಕ ವಂತಿಕೆ ಮೂಲಕ ಸಂಗ್ರಹಿಸಲು ಒಂದು ಸಮಿತಿಯನ್ನು ನೇಮಕಾ ಮಾಡಲಾಗಿದೆ.